KAMS610049832022

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ., ಪಿರಿಯಾಪಟ್ಟಣ.**

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**ದಿನಾಂಕ 02 ನೇ ಏಪ್ರಿಲ್ 2026.**

**ಕ್ರಿಮಿನಲ್ ಪ್ರಕರಣ ಸಂಖ್ಯೆ: 3741/2022**

ಫಿರ್ಯಾದುದಾರರು: ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
*(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)*

**-ವಿರುದ್ಧ-**

ಆರೋಪಿ : ಮೋಹನ್ ಟಿ.ಎಸ್,
ಬಿನ್ ಲೇ.ಟಿ.ಕೆ.ಶಿವಪ್ಪ,
ವಯಸ್ಸು 55 ವರ್ಷ,
ವಾಸ: ನಂ.28, ಜಿಲ್ಲಾ ಆಸ್ಪತ್ರೆ,
ಮಂಡ್ಯ ಕ್ವಾರ್ಟರ್ಸ್, ಮಂಡ್ಯ ತಾಲ್ಲೂಕು.

*(ಆರೋಪಿಯ ಪರವಾಗಿ ಶ್ರೀ **ಎಸ್.ಎನ್.ಜಿ.,** ವಕೀಲರು)*

| | | |
|---|---|---|
| 1. ಕೃತ್ಯ ನಡೆದ ದಿನಾಂಕ | : | 26.04.2022 |
| 2. ಕೃತ್ಯ ವರದಿ ಮಾಡಿದ ದಿನಾಂಕ | : | 26.04.2022 |
| 3. ದೂರುದಾರರ ಹೆಸರು | : | ಲೋಕೇಶ |
| 4. ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 16.04.2025 |
| 5. ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 13.11.2025 |
| 6. ಆರೋಪಿಸಿದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ). |
| 7. ನ್ಯಾಯಾಲಯದ ತೀರ್ಮಾನ | : | ನಿರ್ದೋಷಿ. |

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

-:**ತೀರ್ಪು** :-

ಪೊಲೀಸ್ ನಿರೀಕ್ಷಕರು, ಪಿರಿಯಾಪಟ್ಟಣ ಠಾಣಾ, ಇವರು ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ)ರ ರೀತ್ಯಾ ದಂಡನೀಯವಾದ ಅಪರಾಧಗಳಿಗಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. <u>ಮಾನ್ಯ ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ,</u>

ದಿನಾಂಕ 26.04.2022 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ, ಮೃತ ಮೈಲಾರಿಗೌಡ ರವರು ಪಿರಿಯಾಪಟ್ಟಣಕ್ಕೆ ಬಂದು ರಾಗಿಹಿಟ್ಟನ್ನು ಮಿಷನ್ ಮಾಡಿಕೊಂಡು ವಾಪಾಸ್ ನವಿಲೂರು ಗ್ರಾಮಕ್ಕೆ ಕೆ.ಎ-03-ಹೆಚ್.ಇ-369 ರ ಹೊಂಡಾ ಸ್ಕೂಟಿಯಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಪಿರಿಯಾಪಟ್ಟಣ ಟೌನ್ ಉಪ್ಪಾರಗೇರಿಯಿಂದ ಸ್ವಲ್ಪ ಮುಂದೆ ಇರುವ ವಿರೋಪಾಕ್ಷ ರವರ ತೋಟಕ್ಕೆ ಹೊಂದಿಕೊಂಡಂತೆ ಇರುವ ಬಲಬಾರ್ ಕೆಫೆ ಹೋಟೆಲ್ ಮುಂಭಾಗ ಹಾದು ಹೋಗಿರುವ ಮೈಸೂರು-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ-275 ಮುಖ್ಯ ರಸ್ತೆಯ ದಕ್ಷಿಣ ಬದಿಯಲ್ಲಿ, ಪಿರಿಯಾಪಟ್ಟಣದ ರಸ್ತೆ ಕಡೆಯಿಂದ ಕುಶಾಲನಗರ ರಸ್ತೆಯ ಕಡೆಗೆ ಹೋಗುತ್ತಿದ್ದಾಗ, ಆರೋಪಿಯು ಕೆ.ಎ-11-ಎಂ-3749 ರ ಆಲ್ಟೋ ಕೆ-10 ಕಾರನ್ನು ಕುಶಾಲನಗರ ಕಡೆಯಿಂದ ಪಿರಿಯಾಪಟ್ಟಣ ಕಡೆಗೆ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೇ ಮಾಡಿಕೊಂಡು ಬಂದು, ಮೃತ ಮೈಲಾರಿಗೌಡ ರವರು ಹೋಗುತ್ತಿದ ಸ್ಕೂಟಿಗೆ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿದ ಪರಿಣಾಮ, ಮೈಲಾರಿಗೌಡ ರವರ ತಲೆ, ಎದೆ, ಎರಡು ಕೈ ತೋಳು, ಬಲಕಾಲಿನ ಮಂಡಿಯ ಕೆಳಭಾಗ, ಎಡಕಾಲಿನ ತೊಡೆಯ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿ, ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿಗೆ ಅಂಬ್ಯುಲೆಸ್ ನಲ್ಲಿ ಕರೆದುಕೊಂಡು ಕಂಪಲಾಪುರ ಹತ್ತಿರ ಹೋಗುತಿದ್ದಾಗ, ಮಧ್ಯಾಹ್ನ 3.30 ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೈಲಾರಿಗೌಡ ರವರು

ಮೃತಪಟ್ಟಿರುತ್ತಾರೆ ಎಂದು ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಪಿರಿಯಾಪಟ್ಟಣ ಠಾಣಾ ಆರಕ್ಷಕರು, ಚಾಸಾ.15 ಮಂಜುನಾಥ ಹೆಚ್.ಡಿ.., ಇವರು ಚಾಸಾ.1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ.116/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ ಚಾಸಾ.18 ಜಗದೀಶ ಪಿ ರವರು., ಸಾಕ್ಷ್ಯಾಧಾರಗಳನ್ನು ಪಡೆದು, ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ-207 ರಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿರುತ್ತದೆ. ನಂತರ ಆರೋಪಿಯ ವಿರುದ್ಧ ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ) ರಡಿಗಳಲ್ಲಿ ಆರೋಪಣೆಯನ್ನು ರಚಿಸಿ, ಓದಿ ಹೇಳಲಾಯಿತು, ಆರೋಪಿಯು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**6.** ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 18 ಸಾಕ್ಷಿಗಳ ಪೈಕಿ 8 ಸಾಕ್ಷಿಗಳನ್ನು ಕ್ರಮವಾಗಿ ಪ್ರಾಸಾ-1 ರಿಂದ ಪ್ರಾಸಾ-8 ಎಂದು ವಿಚಾರಣೆಗೆ ಒಳಪಡಿಸಿ, ನಿಪಿ.1 ರಿಂದ ನಿಪಿ.15 ರಂತೆ ದಾಖಲೆಗಳನ್ನು ಮತ್ತು ಸಹಿಗಳನ್ನು ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಪರ ಸಾಕ್ಷ್ಯದಲ್ಲಿ ಆರೋಪಿಯ ವಿರುದ್ಧವಾದ ಸನ್ನಿವೇಶಗಳನ್ನು ಅವರಿಗೆ ಓದಿ ಹೇಳಿ, ಅವರು ನೀಡಿದ ಉತ್ತರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ವಿಚಾರಣಾ ಕಾಲಕ್ಕೆ ನಮೂದಿಸಿಕೊಂಡಿರುತ್ತದೆ. ಆರೋಪಿಯು ತಮ್ಮ ಪರ ಯಾವುದೇ ಮೌಖಿಕ ಅಥವಾ ದಾಖಲೆಗಳ ಸಾಕ್ಷ್ಯವಿಲ್ಲವೆಂದು ನುಡಿದ ಕಾರಣ, ಅವರ ಪರ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಪರಿಗಣಿಸಿ, ವಾದ-ವಿವಾದಗಳಿಗೆ ಪ್ರಕರಣವನ್ನು ಕಾಯ್ದಿರಿಸಲಾಯಿತು.

**7.** ಉಭಯ ಪಕ್ಷಗಾರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ,

**<u>ಅಂಶಗಳು</u>**

**1.** ದಿನಾಂಕ 26.04.2022 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ, ಮೃತ ಮೈಲಾರಿಗೌಡ ರವರು ಪಿರಿಯಾಪಟ್ಟಣಕ್ಕೆ ಬಂದು ರಾಗಿಹಿಟ್ಟನ್ನು ಮಿಷನ್

ಮಾಡಿಕೊಂಡು ವಾಪಾಸ್ ನವಿಲೂರು ಗ್ರಾಮಕ್ಕೆ ಕೆ.ಎ-03-ಹೆಚ್.ಇ-369 ರ ಹೊಂಡಾ ಸ್ಕೂಟಿಯಲ್ಲಿ ಪಿರಿಯಾಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಪಿರಿಯಾಪಟ್ಟಣ ಟೌನ್ ಉಪ್ಪಾರಗೇರಿಯಿಂದ ಸ್ವಲ್ಪ ಮುಂದೆ ಇರುವ ವಿರೋಪಾಕ್ಷ ರವರ ತೋಟಕ್ಕೆ ಹೊಂದಿಕೊಂಡಂತೆ ಇರುವ ಬಲಬಾರ್ ಕೆಫೆ ಹೋಟೆಲ್ ಮುಂಭಾಗ ಹಾದು ಹೋಗಿರುವ ಮೈಸೂರು-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ-275 ಮುಖ್ಯ ರಸ್ತೆಯ ದಕ್ಷಿಣ ಬದಿಯಲ್ಲಿ ಪಿರಿಯಾಪಟ್ಟಣದ ರಸ್ತೆ ಕಡೆಯಿಂದ ಕುಶಾಲನಗರ ರಸ್ತೆಯ ಕಡೆಗೆ ಹೋಗುತ್ತಿದ್ದಾಗ, ಆರೋಪಿಯು ಕೆ.ಎ-11-ಎಂ-3749 ರ ಆಲ್ಟೋ ಕೆ-10 ಕಾರನ್ನು ಕುಶಾಲನಗರ ಕಡೆಯಿಂದ ಪಿರಿಯಾಪಟ್ಟಣ ಕಡೆಗೆ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೇ ಮಾಡಿಕೊಂಡು ಬಂದು, ಮೃತ ಮೈಲಾರಿಗೌಡ ರವರು ಹೋಗುತ್ತಿದ ಸ್ಕೂಟಿಗೆ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿ, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.279 ರಡಿಯಲ್ಲಿ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯು ಸದರಿ ಅಪಘಾತವನ್ನುಂಟು ಮಾಡಿದ ಪರಿಣಾಮ ಮೈಲಾರಿಗೌಡ ರವರ ತಲೆ, ಎದೆ, ಎರಡು ಕೈ ತೋಳು, ಬಲಕಾಲಿನ ಮಂಡಿಯ ಕೆಳಭಾಗ, ಎಡಕಾಲಿನ ತೊಡೆಯ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿ, ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿಗೆ ಅಂಬ್ಯುಲೆಸ್ ನಲ್ಲಿ ಕರೆದುಕೊಂಡು ಕಂಪಲಾಪುರ ಹತ್ತಿರ ಹೋಗುತಿದ್ದಾಗ, ಮಧ್ಯಾಹ್ನ 3.30 ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ, ಆ ಮೂಲಕ ಆರೋಪಿಯು

ಭಾ.ದಂ.ಸಂ.ಕಲಂ.304(ಎ) ರಡಿಯಲ್ಲಿ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ಯಾವ ಆದೇಶ ?

**8. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು,**

ಅಂಶ-1 ಮತ್ತು 2 : **ನಕಾರಾತ್ಮಕವಾಗಿ**

ಅಂಶ-3 : ಅಂತಿಮ ಆದೇಶದಂತೆ

ಈ ಕೆಳಕಂಡ,

**<u>ಕಾ ರ ಣ ಗ ಳು</u>**

**<u>ಅಂಶ-1 ಮತ್ತು 2 :-</u>**

**9.** ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ಪರಿಗಣಿಸಲಾಗಿದೆ.

**10.** ಮಾನ್ಯ ಅಭಿಯೋಜನೆಯು ತಮ್ಮ ದೋಷಾರೋಪಣೆಯನ್ನು ಸಾಭೀತುಪಡಿಸಲು, ಈ ಪ್ರಕರಣದ ದೂರುದಾರರಾದ ಚಾಸಾ.1 ಲೋಕೇಶ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 26.04.2022 ರಂದು ತನ್ನ ತಂದೆ ಮಧ್ಯಾಹ್ನ 1-30 ಗಂಟೆಗೆ ಪಿರಿಯಾಪಟ್ಟಣಕ್ಕೆ ಅಸೀಟ್ ಬಿಡಿಸಲು ಬಂದಿದ್ದರು.

ನಂತರ ತಾನು ಮನೆಯಲ್ಲಿ ಇದ್ದಾಗ ಮಧ್ಯಾಹ್ನ ಸುಮಾರು 3-00 ಗಂಟೆ ಸಮಯದಲ್ಲಿ ತನಗೆ ಚಾಸಾ.2 ಕುಮಾರ ರವರು ಫೋನ್ ಮಾಡಿ ತನ್ನ ತಂದೆಗೆ ಪಿರಿಯಾಪಟ್ಟಣದ ವಿರುಪಾಕ್ಷ ರವರ ತೋಟದ ಹತ್ತಿರ ಬಿ.ಎಂ ರಸ್ತೆಯಲ್ಲಿ ಅಪಘಾತವಾಗಿ, ಅವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು. ತಾನು ಆಸ್ಪತ್ರೆಗೆ ಹೋಗಿ ನೋಡಿದಾಗ, ತನ್ನ ತಂದೆಗೆ ಅಪಘಾತವಾಗಿ ಎರಡೂ ಕಾಲು ಮುರಿದು, ಎಡ ಕೈ ಮುರಿದಿತ್ತು. ಎದೆ ಮತ್ತು ಹೊಟ್ಟೆಯ ಭಾಗಕ್ಕೆ ತಲೆಗೆ ಏಟಾಗಿತ್ತು. ನಂತರ ಅಲ್ಲೇ ಇದ್ದ ಚಾಸಾ.2 ರವರನ್ನು ವಿಚಾರಿಸಿದಾಗ, ಅವರು ವಿರುಪಾಕ್ಷ ರವರ ತೋಟದ ಹತ್ತಿರ ಹೋಗುತ್ತಿದ್ದಾಗ, ತನ್ನ ತಂದೆ ಅವರ ಮುಂದೆ ಕೆಎ.03.ಹೆಇ.369 ರ ಹೊಂಡಾ ಸ್ಕೂಟಿಯಲ್ಲಿ ಪಿರಿಯಾಪಟ್ಟಣದಿಂದ ಕುಶಾಲನಗರ ಕಡೆಗೆ ಹೋಗುತ್ತಿದ್ದಾಗ, ಕುಶಾಲನಗರ ಕಡೆಯಿಂದ ಬರುತ್ತಿದ್ದ ಮಾರುತಿ ಅಲ್ಟೋ ಕಾರು ಚಾಲಕ ತನ್ನ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು, ತನ್ನ ತಂದೆಯ ಬೈಕಿಗೆ ಡಿಕ್ಕಿಪಡಿಸಿದ ಎಂದು ತಿಳಿಸಿದರು. ಆಗ ತಮ್ಮ ತಂದೆ ಕೆಳಗೆ ಬಿದ್ದು, ಅವರನ್ನು ಚಾಸಾ.2 ರಿಂದ 4 ರವರು ಎತ್ತಿ ಸುಧಾರಿಸಿದರು ಎಂದು ತಿಳಿಸಿದರು. ಅಪಘಾತಪಡಿಸಿದ ಕಾರಿನ ನಂಬರ್ ಕೆಎ.11.ಎಂ.3749 ಅಲ್ಟೋ ಕಾರ್ ಆಗಿತ್ತು ಎಂದು ತಿಳಿಸಿದರು. ನಂತರ ತನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಾಗಿ ತಿಳಿಸಿದರು. ನಂತರ ತಮ್ಮ ತಂದೆಯವರನ್ನು ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಅಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ, ಮಾರ್ಗ ಮಧ್ಯೆದಲ್ಲಿ ಅವರು ಮೃತಪಟ್ಟಿರುತ್ತಾರೆ. ನಂತರ ಅವರ ಶವವನ್ನು ವಾಪಸ್ ಪಿರಿಯಾಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಆ ಬಗ್ಗೆ ತಾನು ಪೊಲೀಸರಿಗೆ ದೂರು

ನೀಡಿರುತ್ತೇನೆ. ದೂರನ್ನು ನಿಪಿ.1 ಎಂದು, ತಮ್ಮ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿ, ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ಅಪಘಾತವನ್ನು ತಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ, ಅಪಘಾತ ಯಾರ ಅಜಾಗರೂಕತೆಯಿಂದ ಆಗಿದೆ ಎಂದು ಖುದ್ದಾಗಿ ನೋಡಿಲ್ಲ ಎಂದರೆ ಸರಿ ಎಂದು ಒಪ್ಪುತ್ತಾರೆ.

**11.** ಇನ್ನೂ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.2 ಕುಮಾರ ರವರನ್ನು ಪ್ರಾಸಾ.3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೂರು ವರ್ಷದ ಹಿಂದೆ ತಾನು ತನ್ನ ಟಾಟಾ ಎಸ್ ವಾಹನದಲ್ಲಿ ವಿರುಪಾಕ್ಷರವರ ತೋಟದ ಬಳಿ ಹೋಗುತ್ತಿದ್ದಾಗ, ತನ್ನ ಮುಂದೆ ಮೈಲಾರಿಗೌಡರು ಕುಶಾಲನಗರ ಕಡೆಗೆ ಕೆಎ.03.ಹೆಚ್ಎ.3609 ರ ಸ್ಕೂಟರ್ ನಲ್ಲಿ ಹೋಗುತ್ತಿದ್ದರು, ಆಗ ಕುಶಾಲನಗರ ಕಡೆಯಿಂದ ಕೆಎ.11.ಎಂ.3749 ರ ಅಲ್ಟೋ ಕಾರನ್ನು ಅದರ ಚಾಲಕ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಮೈಲಾರಿಗೌಡರ ಬೈಕಿಗೆ ಡಿಕ್ಕಿಪಡಿಸಿತು. ಆರೋಪಿ ಪಿರಿಯಾಪಟ್ಟಣ ಠಾಣೆಗೆ ಹೋದರು. ನಂತರ ತಾನು ತನ್ನ ವಾಹನದಲ್ಲಿ ಮೈಲಾರಿಗೌಡರನ್ನು ಕರೆದುಕೊಂಡು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದೆ. ನಂತರ ಮೈಲಾರಿಗೌಡರನ್ನು ಒಂದು ಅಂಬ್ಯುಲೆನ್ಸ್ ನಲ್ಲಿ ಮೈಸೂರಿನ ಆಸ್ಪತ್ರೆಗೆ ಕಳುಹಿಸಿದೆ. ಆಗ ಮಾರ್ಗ ಮಧ್ಯೆ ಕಂಪಲಾಪುರ ಗ್ರಾಮದ ಬಳಿ ಮೃತರಾಗಿರುತ್ತಾರೆ ಎಂಬ ವಿಚಾರ ತಿಳಿಯಿತು. ನಂತರ ತಾನು ಪೊಲೀಸ್ ಠಾಣೆಗೆ

ಹೋದೆ. ತಾನು ಪೊಲೀಸರಿಗೆ ಘಟನೆ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಮಹಜರನ್ನು ನಿಪಿ.2 ಎಂದು, ಕಚ್ಚಾ ನಕಾಶೆಯನ್ನು ನಿಪಿ.3 ಎಂದು, ಸಹಿಗಳನು ನಿಪಿ.2(ಬಿ) ಮತ್ತು 3(ಬಿ) ಎಂದು ಗುರಿತಿಸಲಾಗಿದೆ. ನಿಪಿ.2 ಮತ್ತು 3ಕ್ಕೆ ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನೆನಪಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.3 ರವರು ಪಾಟೀ ಸವಾಲು ಮಾಡಿದ್ದು, ಪ್ರಾಸಾ.3 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾನು, ಲೋಕೇಶ ಹಾಗೂ ಮೈಲಾರಿಗೌಡರು ಸ್ನೇಹಿತರು ಎಂದರೆ, ದಾಯಾದಿಗಳು ಎಂದು ನುಡಿಯುತ್ತಾರೆ. ತಾನು ತನ್ನ ವಾಹನವನ್ನು ಉಪ್ಪಾರಗೇರಿಯಲ್ಲಿ ಸುಧಾಕರ್ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿಸಿರುತ್ತೇನೆ. ಬಿ.ಎಂ.ರಸ್ತೆಯಲ್ಲಿ ಹಲವಾರು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಉಪ್ಪಾರಗೇರಿ ಮುಂದೆ ಜನಂದಣಿ ಜಾಸ್ತಿ ಇರುತ್ತದೆ ಎಂದರೆ ಸರಿ. ಆರೋಪಿ ಅಪಘಾತವಾದ ಸ್ಥಳದಲ್ಲಿ ಹಂಪ್ಸ್ ಇದೆ ಎಂದರೆ ಸರಿ. ವಾಹನ ಚಲಾಯಿಸಬೇಕಾದರೆ ಚಾಲಕನು ಅವರ ಮುಂದೆ ಮಾತ್ರ ನೋಡಿಕೊಂಡು ವಾಹನ ಚಲಾಯಿಸುತ್ತಾರೆ ಎಂದರೆ ಸರಿ. ಅವರ ಸುತ್ತ ಮುತ್ತ ನಡೆಯುವುದು ಅವರಿಗೆ ಗೊತ್ತಾಗುವುದಿಲ್ಲ ಎಂದರೆ ಸರಿ. ಅಪಘಾತ ಯಾರ ಅಜಾಗರೂಕತೆಯಿಂದ ಆಯಿತು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ

ಸರಿ. ಬೈಕಿನ ಯಾವ ಭಾಗಕ್ಕೆ ಡಿಕ್ಕಿಯಾಗಿರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ ಎಂದು ಒಪ್ಪುತ್ತಾರೆ.

**12.** ಇನ್ನೋರ್ವ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ.4 ಮಣಿಕಂಠ ರವರನ್ನು ಪ್ರಾಸಾ.4 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈಗ 2 ವರ್ಷದ ಹಿಂದೆ ತಾನು ಹಾಗೂ ಪ್ರತಾಪ ರವರು ಉಪ್ಪಾರಗೇರಿ ಬಳಿ ಒಂದು ಕ್ಯಾಂಟೀನ್ ನಲ್ಲಿ ಟೀ ಕುಡಿಯುತ್ತಾ ಕುಳಿತಿದ್ದಾಗ, ಕುಶಾಲನಗರ-ಮೈಸೂರು ರಸ್ತೆಯಲ್ಲಿ ಗ್ಯಾಸ್ ಗಾಡಿ ಹುಡುಗ ದಿನೇಶ ರವರು ಬಂದು ಅಪಘಾತವಾಗಿದೆ ಎಂದು ತಿಳಿಸಿದರು. ತಾವು ಹೋಗಿ ನೋಡಿದಾಗ, ತಮ್ಮ ಊರಿನ ಲೋಕೇಶ ರವರ ತಂದೆ ಚಂದಣ್ಣ ರವರಿಗೆ ಅಪಘಾತವಾಗಿತ್ತು. ನಂತರ ತಾವು ಅವರನ್ನು ಎತ್ತಿ ಸುಧಾರಿಸಿ ನೀರು ಕುಡಿಸಿರುತ್ತೇವೆ. ನಂತರ ಚಾಸಾ.2 ಕುಮಾರ ರವರ ಅಲ್ಲೇ ಇದ್ದು, ಅವರ ವಾಹನದಲ್ಲಿ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು. ಆರೋಪಿಯು ಅಪಘಾತಪಡಿಸಿದ ವಾಹನವನ್ನು ಓಡಿಸುತ್ತಿದ್ದರು ಎಂದು ದಿನೇಶ ರವರು ಹೇಳಿದರು. ಸ್ಥಳದಲ್ಲಿ ಆರೋಪಿ ಇರಲಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಅಪಘಾತ ಸ್ಕೂಟಿ ಮತ್ತು ಕಾರಿನ ಮಧ್ಯೆ ಆಗಿತ್ತು, ಸದರಿ ವಾಹನಗಳು ಸ್ಥಳದಲ್ಲಿ ಇದ್ದವು, ಅವುಗಳ ನಂಬರ್ ತನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತಾನು ಈ ಹಿಂದೆ ನೋಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.4 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪ್ರಾಸಾ.4 ರವರು ಆರೋಪಿಯು ಅಜಾಗರೂಕತೆಯಿಂದ ಅಲ್ಟೋ ಕಾರನ್ನು ಚಾಲನೇ ಮಾಡಿ ಮೈಲಾರಿಗೌಡರ ಬೈಕಿಗೆ ಡಿಕ್ಕಿಪಡಿಸಿರುವ ಅಂಶವನ್ನು ಅಲ್ಲಗಳೆದಿರುತ್ತಾರೆ.

**13.** ಇನ್ನೂ ಚಾಸಾ.3 ಪ್ರತಾಪ್ ರವರನ್ನು ಪ್ರಾಸಾ.6 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೃತ ಮೈಲಾರಿಗೌಡ ತನಗೆ ಗೊತ್ತು, ಚಾಸಾ.1 ತನಗೆ ಗೊತ್ತು, ಆರೋಪಿ ತನಗೆ ಗೊತ್ತಿಲ್ಲ, ಈಗ್ಗೆ 2 ವರ್ಷದ ಹಿಂದೆ ತಾನು ಪಿರಿಯಾಪಟ್ಟಣದಿಂದ ತಮ್ಮ ಊರು ನವಿಲೂರಿಗೆ ಹೋಗುತ್ತಿದ್ದಾಗ, ಮಧ್ಯಾಹ್ನ 2 ಗಂಟೆ ಸಮಯದಲ್ಲಿ ವಿರುಪಾಕ್ಷ ರವರ ತೋಟದ ಬಳಿ ಹೋದಾಗ ಮೃತ ಮೈಲಾರಿಗೌಡರು ಅಪಘಾತವಾಗಿ ಸ್ಥಳದಲ್ಲಿ ಬಿದ್ದಿದ್ದರು. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ. ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.6 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**14.** ಇನ್ನೂ ಮಹಜರ್ ಸಾಕ್ಷಿಗಳಾದ ಚಾಸಾ.6 ರವರನ್ನು ಸತೀಶ ರವರನ್ನು ಪ್ರಾಸಾ.2 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮಹಜರನ್ನು ನಿಪಿ.2 ಎಂದು, ಕಚ್ಚಾ ನಕಾಶೆಯನ್ನು ನಿಪಿ.3 ಎಂದು, ತಮ್ಮ ಸಹಿಗಳನ್ನು ನಿಪಿ.2(ಎ), 3(ಎ) ಎಂದು ಗುರುತಿಸಲಾಗಿದೆ. ಪೊಲೀಸರು ತಮ್ಮ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ.2 ಮತ್ತು 3 ರಲ್ಲಿ ಬರೆದ ವಿಚಾರಗಳು ತಮಗೆ ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.2 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿದರು ಸಹಿತ, ತಮ್ಮ ವಾದವನ್ನು ಪುಷ್ಠೀಕರಿಸುವಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**15.** ಇನ್ನೂ ಚಾಸಾ.5 ಸೋಮೇಗೌಡ ರವರನ್ನು ಪ್ರಾಸಾ.7 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಿಪಿ.2 ಮಹಜರಿನಲ್ಲಿರುವ ತಮ್ಮ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಗಿದೆ. ನಿಪಿ.2 ಕ್ಕೆ ತಾನು ದಿನಾಂಕ 26.04.2022 ರಂದು ಪೊಲೀಸರು ಅಪಘಾತವಾದ ಸ್ಥಳವಾದ ವಿರುಪಾಕ್ಷರವರ ತೋಟದ ಬಳಿ ಮಹಜರ್ ಮಾಡಲು ಬಂದಾಗ ಸಹಿ ಮಾಡಿರುತ್ತೇನೆ. ಪೊಲೀಸರು ಸ್ಥಳದಲ್ಲಿ ಇದ್ದ ಒಂದು ಸ್ಕೂಟರನ್ನು ಹಾಗೂ ಒಂದು ಮಾರುತಿ ಕಾರನ್ನು ತೆಗೆದುಕೊಂಡು ಹೋದರು. ಅವುಗಳ ನಂಬರ್ ತನಗೆ ನೆನಪಿಲ್ಲ. ಮಹಜರ್ ಸಮಯದಲ್ಲಿ ಚಾಸಾ .6 ಮತ್ತು 2

ರವರು ಸಹ ಇದ್ದರು. ಮಹಜರನ್ನು ಸಂಜೆ 5-30 ರಿಂದ 6-30 ಗಂಟೆಯವರೆಗೆ ಮಾಡಿರುತ್ತಾರೆ. ಫೋಟೋಗಳಿರುವ ಎರಡು ಹಾಳೆಗಳನ್ನು ನಿಪಿ.14 ಮತ್ತು 15 ಎಂದು ಗುರುತಿಸಿ, ಸಾಕ್ಷವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.7 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.7 ರವರು ತಮ್ಮ ಪಾಟೀ ಸವಾಲಿನಲ್ಲಿ, ಮಹಜರ್ ಮಾಡಲು ತನಗೆ ಪೊಲೀಸರು ನೊಟೀಸು ನೀಡಿಲ್ಲ. ಮಹಜರ್ ನಲ್ಲಿ ಬರೆದ ವಿಚಾರಗಳ ಬಗ್ಗೆ ತನಗೆ ಗೊತ್ತಿಲ್ಲ. ಮೃತ ಮೈಲಾರಿಗೌಡರು ಹಾಗೂ ತಾನು ಸಂಬಂಧಿಕರು ಎಂದರೆ ಸರಿ. ಮಹಜರಿಗೆ ಪೊಲೀಸರ ಕೋರಿಕೆಯ ಮೇಲೆ ಸಹಿ ಹಾಕಿದ್ದೀರಾ ಎಂದರೆ ಸರಿ ಎಂದು ಒಪ್ಪುತ್ತಾರೆ.

**16.** ಇನ್ನೂ ತನಿಖಾಧಿಕಾರಿಗಳಾದ ಚಾಸಾ.18 ಜಗದೀಶ ಪಿ ರವರನ್ನು ಪ್ರಾಸಾ.5 ರಂತೆ ಹಾಗೂ ಚಾಸಾ.16 ಪುಟ್ಟರಾಜು ಎಂ.ಎಸ್ ರವರನ್ನು ಪ್ರಾಸಾ.8 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾವು ಕೈಗೊಂಡ ತನಿಖೆಯ ಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ.5 ಮತ್ತು 8 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ.

**17.** ಒಟ್ಟಾರೆಯಾಗಿ ಪ್ರಸ್ತುತ ಪ್ರಕರಣವನ್ನು ಗಮನಿಸಿದಾಗ ನ್ಯಾಯಾಲಯಾದ ಅವಗಾಹನೆಗೆ ಬರುವ ಅಂಶವೇನೆಂದರೆ, ಮಾನ್ಯ

ಅಭಿಯೋಜನೆಯು ಆರೋಪಿಯು ಕೆ.ಎ-11-ಎಂ-3749 ರ ಅಲ್ಟೋ ಕಾರನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೇ ಮಾಡಿ, ಮೈಲಾರಿಗೌಡ ರವರ ಸಾವಿಗೆ ಕಾರಣವಾಗಿರುವುದಾಗಿ ಆರೋಪಿಸಿರುತ್ತಾರೆ.

**18.** ಈ ಪ್ರಕರಣದ ದೂರುದಾರರದ ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮಾನ್ಯ ಅಭಿಯೋಜನೆಯ ವಾದವನ್ನು ಬೆಂಬಲಿಸಿರುತ್ತಾರೆ. ಆರೋಪಿ ಪರ ವಕೀಲರು ಪ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿದ್ದು, ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ಅಪಘಾತವನ್ನು ತಾನು ಖುದ್ದಾಗಿ ನೋಡಿಲ್ಲ, ಅಪಘಾತ ಯಾರ ಅಜಾಗರೂಕತೆಯಿಂದ ಆಗಿದೆ ಎಂದು ಖುದ್ದಾಗಿ ಗೊತ್ತಿಲ್ಲವೆಂದು ಒಪ್ಪುತ್ತಾರೆ.

**19.** ಪ್ರತ್ಯಕ್ಷ ಸಾಕ್ಷಿಯಾದ ಪ್ರಾಸಾ.3 ರವರು ತಮ್ಮ ಪಾಟೀ ಸವಾಲಿನಲ್ಲಿ, ಅಪಘಾತ ಯಾರ ಅಜಾಗರೂಕತೆಯಿಂದ ಆಯಿತು ಎಂದು ಗೊತ್ತಿಲ್ಲ, ಬೈಕಿನ ಯಾವ ಭಾಗಕ್ಕೆ ಡಿಕ್ಕಿಯಾಗಿರುತ್ತದೆ ಎಂದು ಗೊತ್ತಿಲ್ಲವೆಂದು ಒಪ್ಪುತ್ತಾರೆ. ಇನ್ನೂ ಪ್ರಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ, ಆರೋಪಿಯನ್ನು ತಾನು ಈ ಹಿಂದೆ ನೋಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ.6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಗೊತ್ತಿಲ್ಲ, ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3, 4 ಮತ್ತು 6 ರವರನ್ನು ಪಾಟೀ ಸವಾಲು ಮಾಡಿದರು ಸಹಿತ, ಆರೋಪಿಯು ಕಾರನ್ನು ಅತಿವೇಗವಾಗಿ ಮತ್ತು

ಅಜಾಗರೂಕತೆಯಿಂದ ಚಾಲನೇ ಮಾಡಿದ ಪರಿಣಾಮ ಅಪಘಾತವಾಗಿರುತ್ತದೆ ಎಂಬ ಅಂಶಕ್ಕೆ ಪೂರಕವಾಗಿ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ.

**20.** ಮಹಜರ್ ಸಾಕ್ಷಿಯಾದ ಪ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ, ಪೊಲೀಸರು ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ನಿಪಿ.2 ಮತ್ತು 3 ರಲ್ಲಿ ಬರೆದ ವಿಚಾರಗಳು ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಾಸಾ.2 ರವರನ್ನು ಪಾಟೀ ಸವಾಲು ಮಾಡಿದರು ಸಹ, ಅಭಿಯೋಜನೆಯ ವಾದಕ್ಕೆ ಪೂರಕವಾದಂತಹ ಹೇಳಿಕೆಗಳನ್ನು ಪಡೆಯಲು ವಿಫಲರಾಗಿರುತ್ತಾರೆ. ಈ ಮೂಲಕ ಪ್ರಾಸಾ.2 ರವರು ಅಭಿಯೋಜನೆಯ ವಾದವನ್ನು ನಿರಾಕರಿಸಿರುತ್ತಾರೆ.

**21.** ಪ್ರಾಸಾ.7 ರವರು ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಯ ವಾದವನ್ನು ಬೆಂಬಲಿಸಿದರೂ ಸಹಿತ, ತಮ್ಮ ಪಾಟೀ ಸವಾಲಿನಲ್ಲಿ, ಮಹಜರ್ ನಲ್ಲಿ ಬರೆದ ವಿಚಾರಗಳ ಬಗ್ಗೆ ತನಗೆ ಗೊತ್ತಿಲ್ಲ, ಮಹಜರಿಗೆ ಪೊಲೀಸರ ಕೋರಿಕೆಯ ಮೇಲೆ ಸಹಿ ಹಾಕಿರುವುದಾಗಿ ಒಪ್ಪುತ್ತಾರೆ. ಈ ನಿಟ್ಟಿನಲ್ಲಿ ಮಾನ್ಯ ಅಭಿಯೋಜನೆಯು ಮಹಜರ್ ಜರುಗಿಸಿದ ಅಂಶವನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ.

**22.** ಇನ್ನೂ ತನಿಖಾಧಿಕಾರಿಗಳಾದ ಪ್ರಾಸಾ.5 ಮತ್ತು 8 ರವರು ತಮ್ಮ ಸಾಕ್ಷ್ಯದಲ್ಲಿ ತಾವು ಕೈಗೊಂಡ ತನಿಖೆಯ ಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದರೇ ಈ ಸಾಕ್ಷಿಗಳ ಸಾಕ್ಷ್ಯಕ್ಕೆ ಹೆಚ್ಚಿನ

ಮಹತ್ವವಿಲ್ಲವೆಂದು ಹೇಳಬಹುದು. ಕಾರಣವೇನೆಂದರೆ, ಈ ಸಾಕ್ಷಿಗಳ ಸಾಕ್ಷ್ಯವು, ಪ್ರತ್ಯಕ್ಷ ಮತ್ತು ಮಹಜರ್ ಸಾಕ್ಷಿಗಳ ಸಾಕ್ಷ್ಯದ ಮೇಲೆ ಅವಲಂಬಿತವಾಗಿರುತ್ತದೆ. ಆದರೇ, ಪ್ರಸ್ತುತ ಪ್ರಕರಣದ ದೂರುದಾರರಾದ ಪ್ರಾಸಾ.1 ರವರು, ಪ್ರತ್ಯಕ್ಷ ಹಾಗೂ ಮಹಜರ್ ಸಾಕ್ಷಿಗಳಾದ ಪ್ರಾಸಾ.2 ರಿಂದ 4, 6 ಮತ್ತು 7 ರವರು ಅಭಿಯೋಜನೆಯ ಪರವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

**23.** ಇನ್ನೂ ನಿಪಿ.7 ರ ಮರಣೋತ್ತರ ವರದಿಯ ಅನ್ವಯ ಮೈಲಾರಿಗೌಡ ಎಂಬುವವರು ಮೃತಪಟ್ಟಿರುವುದು ಕಂಡು ಬಂದಿರುತ್ತದೆ. ಈಗಾಗಲೇ ಮೇಲೆ ವಿವರಿಸಿದಂತೆ, ಅಪಘಾತದಿಂದ ಮೈಲಾರಿಗೌಡ ಎಂಬುವವರು ಮೃತಪಟ್ಟಿರುವ ಅಂಶ ರುಜುವಾತು ಆಗಿದ್ದರು ಕೂಡ, ಆರೋಪಿಯು ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯ ಚಾಲನೇ ಮಾಡಿದ ಪರಿಣಾಮ, ಸದರಿ ಅಪಘಾತವಾಗಿರುತ್ತದೆ ಎಂದು ಮಾನ್ಯ ಅಭಿಯೋಜನೆಯು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ.

**24.** ಮಾನ್ಯ ಅಭಿಯೋಜನೆಯು ಆರೋಪಿಯು ತಮ್ಮ ಕಾರನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೇ ಮಾಡಿರುವ ಅಂಶವನ್ನು ರುಜುವಾತು ಪಡಿಸಬೇಕಾಗಿರುತ್ತದೆ. ಆದರೇ, ಸದರಿ ಅಂಶಕ್ಕೆ ಪೂರಕವಾಗಿ ತಮ್ಮ ಪರವಾಗಿ ನಿಸ್ಸಂಶಯಾತೀತವಾಗಿ ಸಾಕ್ಷ್ಯವನ್ನು ನುಡಿಸಿಕೊಳ್ಳಲು ವಿಫಲವಾಗಿರುತ್ತದೆ. ಹಾಗಾಗಿ ಆರೋಪಿಯು ತಮ್ಮ ವಾಹನವನ್ನು ಅತಿವೇಗವಾಗಿ ಮತ್ತು ಅಜಾಗರೂತೆಯಿಂದ ಚಾಲನೇ ಮಾಡಿ ಅಪಘಾತವನ್ನುಂಟು ಮಾಡಿರುತ್ತಾರೆ ಎಂದು ನಿಸ್ಸಂಶಯಾತೀತವಾಗಿ ಹೇಳಲು

ಸಾಧ್ಯವಿಲ್ಲ. ಈ ಎಲ್ಲ ಸಾಕ್ಷಿಗಳ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಂಡಾಗ, ಈ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿರುತ್ತದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ.

**25.** ಮೇಲ್ಕಂಡ ವಿವರಣೆಯ ಆಧಾರದಲ್ಲಿ, ನ್ಯಾಯಾಲಯದ ದೃಷ್ಠಿಯಲ್ಲಿ, ಮಾನ್ಯ ಅಭಿಯೋಜನೆಯು ಆರೋಪಿಯ ಮೇಲೆ ಹೊರಿಸಿದ ಆರೋಪಣೆಗಳನ್ನು ಸಾಬೀತುಪಡಿಸುವ ನಂಬಲು ಅರ್ಹವಾದ ಪೂರಕ ಸಾಕ್ಷ್ಯವನ್ನು ಅಭಿಯೋಜನೆಯು ರುಜುವಾತುಪಡಿಸಲು ವಿಫಲವಾದ ಕಾರಣ, ಸಂಶಯದ ಲಾಭವನ್ನು ಪ್ರಸ್ತುತ ಪ್ರಕರಣದ ಆರೋಪಿಗೆ ವಿಸ್ತರಿಸುತ್ತಾ ನ್ಯಾಯಾಲಯವು ಅಂಶ-1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**ಅಂಶ-3**:-

**26.** ಮೇಲಿನ ಅಂಶ-1 ಮತ್ತು 2 ರಲ್ಲಿ ಚರ್ಚಿಸಿದ ಕಾರಣಗಳಿಗೆ ಬಂದ ತೀರ್ಮಾನದಂತೆ, ಈ ಕೆಳಕಂಡಂತೆ ;

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರಡಿ, ಆರೋಪಿಯನ್ನು ಭಾರತ ದಂಡ ಸಂಹಿತೆ ಕಲಂ.279 ಮತ್ತು 304(ಎ)ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ.437 ಎ ರನ್ವಯ ಬರೆದುಕೊಟ್ಟ ಬಂಧಪತ್ರಗಳು ಹಾಗೂ ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 06 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

ಪಿ.ಎಫ್.ನಂ.76/2022 ರಲ್ಲಿರುವ ಕೆ.ಎ-11-ಎಂ-3749 ನೊಂದಣೀಯ ಆಲ್ಟೋ ಕಾರಿನ ಮೇಲೆ ಮಾಡಿದ ಮಧ್ಯಂತರ ಸುಪರ್ದಿ ಆದೇಶವನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸ್ಥಿರೀಕರಿಸಲಾಗಿದೆ ಹಾಗೂ ಕೆ.ಎ-03-ಹೆಚ್.ಇ-369 ನೊಂದಣೀಯ ಬೈಕನ್ನು ಮೇಲ್ಮನವಿ ಅವಧಿ ಮುಗಿದ ನಂತರ ದಂ.ಪ್ರ.ಸಂಹಿತೆ ಅಧ್ಯಾಯ 34ರ ರೀತ್ಯಾ ವಿಲೇವಾರಿ ಮಾಡಲು ಆದೇಶಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **02 ನೇ ಏಪ್ರಿಲ್ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

-: **<u>ಅನುಬಂಧ</u>** :-

**<u>ಅಭಿಯೋಜನೆಯ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ :-</u>**

| | | |
|---|---|---|
| ಪ್ರಾಸಾ.1 | - | ಲೋಕೇಶ |
| ಪ್ರಾಸಾ.2 | - | ಸತೀಶ |
| ಪ್ರಾಸಾ.3 | - | ಕುಮಾರ |
| ಪ್ರಾಸಾ.4 | - | ಮಣಿಕಂಠ |
| ಪ್ರಾಸಾ.5 | - | ಜಗದೀಶ ಪಿ |
| ಪ್ರಾಸಾ.6 | - | ಪ್ರತಾಪ್ |
| ಪ್ರಾಸಾ.7 | - | ಸೋಮೇಗೌಡ |
| ಪ್ರಾಸಾ.8 | - | ಪುಟ್ಟರಾಜು ಎಂ.ಎಸ್ |

**<u>ಅಭಿಯೋಜನೆಯ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು:-</u>**

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | - | ಪ್ರಾಸಾ.5 ರವರ ಸಹಿ |
| ನಿಪಿ.2 | - | ಸ್ಥಳ ಮಹಜರ್ |
| ನಿಪಿ.2(ಎ) | - | ಪ್ರಾಸಾ.2 ರವರ ಸಹಿ |
| ನಿಪಿ.2(ಬಿ) | - | ಪ್ರಾಸಾ.3 ರವರ ಸಹಿ |
| ನಿಪಿ.2(ಸಿ) | - | ಪ್ರಾಸಾ.7 ರವರ ಸಹಿ |
| ನಿಪಿ.2(ಡಿ) | - | ಪ್ರಾಸಾ.8 ರವರ ಸಹಿ |
| ನಿಪಿ.3 | - | ಕಚ್ಚಾ ನಕಾಶೆ |
| ನಿಪಿ.3(ಎ) | - | ಪ್ರಾಸಾ.2 ರವರ ಸಹಿ |
| ನಿಪಿ.3(ಬಿ) | - | ಪ್ರಾಸಾ.3 ರವರ ಸಹಿ |
| ನಿಪಿ.3(ಸಿ) | - | ಪ್ರಾಸಾ.8 ರವರ ಸಹಿ |
| ನಿಪಿ.4 | - | ಪ್ರಾಸಾ.4 ರವರ ಹೇಳಿಕೆ |
| ನಿಪಿ.5 | - | ಪ್ರ.ವ.ವರದಿ |
| ನಿಪಿ.5(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.6 | - | ಶವ ತನಿಖಾ ವರದಿ |

| | | |
|---|---|---|
| ನಿಪಿ.6(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.7 | - | ಮರಣೋತ್ತರ ವರದಿ |
| ನಿಪಿ.7(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.8 | - | ಐ.ಎಂ.ವಿ.ವರದಿ |
| ನಿಪಿ.8(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.9 | - | ಕಲಂ.133 ರ ನೋಟೀಸು |
| ನಿಪಿ.9(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.10 | - | ಕಲಂ.133 ರ ನೋಟೀಸಿಗೆ ಉತ್ತರ |
| ನಿಪಿ.10(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.11 | - | ಕಲಂ.41(ಎ) ನೋಟೀಸು |
| ನಿಪಿ.11(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.12 | - | ಇಂಡಿಮಿನಿಟಿ ಬಾಂಡ್ |
| ನಿಪಿ.12(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.13 | - | ಪ್ರಾಸಾ.6 ರವರ ಹೇಳಿಕೆ |
| ನಿಪಿ.14&15 | - | ಪೋಟೋಗಳಿರುವ ಎರಡು ಹಾಳೆಗಳು. |

**<u>ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿ:</u>** ಇಲ್ಲ

**<u>ಆರೋಪಿ ಪರ ವಿಚಾರಣೆಯಾದ ಸಾಕ್ಷಿದಾರರು</u>** : ಇಲ್ಲ

**<u>ಆರೋಪಿ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು</u>** : ಇಲ್ಲ

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.